ಇಂದು ದಿಃ **27-01-2025** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಸಿ.ಕೆ ವಕೀಲರಿಂದ ಎದುರುದಾರರ ಪರಃ**

ಅಪಘಾತದ ಸಮಯದಲ್ಲಿ ನನ್ನ ವಯಸ್ಸು 33 ವರ್ಷ ಇದ್ದ ಬಗ್ಗೆ ತೋರಿಸಲು ನಾನು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಬಿ.ಪಿ.ಎಲ್ ರೇಷನ್ ಕಾರ್ಡ್ ಹೊಂದಿದ್ದೇನೆ. ಅಪಘಾತದ ಸಮಯದಲ್ಲಿ ನನಗೆ ಡಿ.ಎಲ್ ಮತ್ತು ನನ್ನ ವಾಹನಕ್ಕೆ ವಿಮೆ ಇದ್ದ ಬಗ್ಗೆ ತೋರಿಸಲು ನಾನು ದಾಖಲೆ ಹಾಜರುಪಡಿಸಿದ್ದೇನೆ. ಸಾಕ್ಷಿಗೆ ಅವರು ಹಾಜರುಪಡಿಸಿದ ದಾಖಲೆಗಳನ್ನು ತೋರಿಸಿ ಕೇಳಲು ಅದರಲ್ಲಿ ಡಿ.ಎಲ್ ಮತ್ತು ವಿಮೆ ಇಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ನಾನು ನನ್ನ ಡಿ.ಎಲ್ ಮತ್ತು ಆಟೋದ ವಿಮೆ ಹಾಜರುಪಡಿಸದೇ ಇದ್ದರೂ ಹಾಜರುಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಈಗ ಆರೋಗ್ಯವಾಗಿದ್ದೇನೆ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಅಪಘಾತ ಸಂಭವಿಸಿದೆ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಅಪಘಾತ ಆದ ಕಾರಣ, 1 ನೇ ಎದುರುದಾರನ ಕೈಗೆ ಪೆಟ್ಟಾಗಿ ಆತನಿಗೂ ಸಹ ಮೂಳೆ ಮುರಿತು ಆಗಿ ಸಾಕಷ್ಟು ತೊಂದರೆ ಅನುಭವಿಸಿದ್ದಾನೆ ಎಂದರೆ ಸರಿಯಲ್ಲ. ನಮ್ಮ ವಾಹನಗಳಿಗೆ ವಿಮೆ ಇಲ್ಲದೇ ಇದ್ದ ಕಾರಣ ಊರಿನ ಹಿರಿಯರು ನನಗೆ ಹೆಚ್ಚು ಪೆಟ್ಟು ಆಗಿದ್ದ ಕಾರಣ, ನನಗೆ ರೂ.30 ಸಾವಿರ ಕೊಡಬೇಕು ಎಂದು ತೀರ್ಮಾನಿಸಿ ಆ ಪ್ರಕಾರ ಎದುರುದಾರರು ರೂ.30 ಸಾವಿರ ನನಗೆ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ನನ್ನ ವಾಹನಕ್ಕೆ ವಿಮೆ ಇದೆ ಎಂದು ಹೇಳುತ್ತಾರೆ. ನನ್ನ ವಾಹನಕ್ಕೆ ಒಂದು ವೇಳೆ ವಿಮೆ ಇದ್ದರೆ ನಾನು ವಿಮಾ ಕಂಪನಿಯನ್ನು ಈ ಅರ್ಜಿಯಲ್ಲಿ ಅವಶ್ಯಕ ಪಕ್ಷಗಾರ ಎಂದು

ಕಾಣಿಸುತ್ತಿದ್ದೆ ಎಂದರೆ ಸರಿಯಲ್ಲ. 1 ನೇ ಎದುರುದಾರನ ತಪ್ಪಿನಿಂದ ಅಪಘಾತ ಆಗಿದೆ ಎಂದು ಮತ್ತು ನನಗೆ ತೀವ್ರ ಸ್ವರೂಪದ ಗಾಯಗಳು ಆಗಿವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ನನ್ನ ವಯಸ್ಸು, ಆದಾಯ ಮತ್ತು ಉದ್ಯೋಗದ ಕುರಿತು ತಪ್ಪು ತಿಳಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ಅಪಘಾತ ಆಗದೇ ಇದ್ದರೂ ಸುಳ್ಳು ವಿವರಗಳನ್ನು ತೋರಿಸಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ:30-12-2016 ರಂದು ನಾನು ಮಲೇಬೆನ್ನೂರು ಕುಮಾರನಹಳ್ಳಿ ರಸ್ತೆಯಲ್ಲಿ ಹೋಗಬೇಕಾದರೆ 1 ನೇ ಎದುರುದಾರ ವೇಗವಾಗಿ ತನ್ನ ಆಟೋವನ್ನು ಚಲಾಯಿಸಿಕೊಂಡು ಬಂದು ನನಗೆ ಅಪಘಾತ ಪಡಿಸಿದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯಲ್ಲಿ ಒಳರೋಗಿ ಎಂದು ಚಿಕಿತ್ಸೆ ಪಡೆದು ಮತ್ತು ನನ್ನ ಚಿಕಿತ್ಸೆಗೆ ರೂ.2 ಲಕ್ಷ ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಅಪಘಾತದಲ್ಲಿ ಆದ ಗಾಯಗಳಿಂದ ಶಾಶ್ವತ ಅಂಗನ್ಯೂನತೆ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಇನ್ನು ಮುಂದಿನ ಚಿಕಿತ್ಸೆಗೆ ರೂ.1 ಲಕ್ಷ ಬೇಕು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ನಾನು ಹೆಚ್ಚಿನ ಪ್ರಮಾಣ ಅಂಗನ್ಯೂನತೆ ನಮೂದಿಸಿರುವ ಪ್ರಮಾಣ ಪತ್ರವನ್ನು ವೈದ್ಯರಿಗೆ ಮನವಿ ಮಾಡಿ ಪಡೆದುಕೊಂಡು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ದಿನ ನಾನೇ ನನ್ನ ವಾಹನವನ್ನು ವೇಗವಾಗಿ ಚಲಾಯಿಸಿಕೊಂಡು ಹೋಗಿ ನಿದಾನವಾಗಿ ಹೊರಟಿದ್ದ 1 ನೇ ಎದುರುದಾರರ ಆಟೋಗೆ ಡಿಕ್ಕಿ ಹೊಡೆದು ನಾನೇ ಆತನಿಗೆ ಅಪಘಾತ ಪಡಿಸಿದೆನು ಎಂದರೆ ಸರಿಯಲ್ಲ. ಹಿರಿಯರು ಪಂಚಾಯಿತಿ ಮಾಡಿ ನನಗೆ ಕೊಡಿಸಿದ ಪರಿಹಾರ ಸರಿ ಇದೆ ಎಂದರೆ ಸರಿಯಲ್ಲ. ನಾನು ಮತ್ತು ಪೋಲೀಸರು ಶಾಮೀಲಾಗಿ 1 ನೇ ಎದುರುದಾರನಿಗೆ ತೊಂದರೆ ಕೊಡುವ

ಉದ್ದೇಶದಿಂದ ನಾನು ಸುಳ್ಳು ಪಿರ್ಯಾದಿಕೊಟ್ಟು, ಆ ಪ್ರಕಾರ ಪೋಲೀಸರು ಸುಳ್ಳುದೋಷರೋಪಣಾ ಪಟ್ಟಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಎದುರುದಾರರು ಯಾವುದೇ ಪರಿಹಾರಕೊಡಲು ಭಾದ್ಯಸ್ಥರು ಅಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚುಗೆ ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.